ತಿಳಿದ ಮೇಲೆ ಬೇಸರದಿಂದ ಆಕಾಶದ ಕಡೆ ಮುಖ ಮಾಡಿದ್ರ ಯಾರೋ ಗೋಬಿಯನ್ನು ಅಲ್ಲಿ ಸಿಕ್ಕಿಸಿ ಹೋಗಿರುವಂತೆ ಚುಕ್ಕಿಗಳು ಕಾಣುತಿದ್ದವು. ದಿನವೂ ಕಣ್ಣೆದುರಿಗೆ ಗೋಬಿ ಕಾಣ್ತಿದ್ರೂ ಅವು ಚುಕ್ಕಿಯಂಗ ಅದೆಷ್ಟು ದೂರ ಅನಿಸಿ ಒಳಗೊಳಗ ಮರುಗುತ್ತಿದ್ದ.

* * *

ಮುಂಜಾನೆ ಮಾದೇವಿ ಕೊಟ್ಟ ಕಸಬರಿಗಿ ಏಟು ಇನ್ನೂ ಚೊರ್‌ಗುಡುತ್ತಲೇಯಿತ್ತು. ದಿನಪೂರ್ತಿ ಎಲ್ಲೆಲ್ಲೋ ಅಡ್ಯಾಡಿ ಹೊತ್ತು ಮುಳುಗ್ತಿದ್ದಂಗ ಮನಿಗೆ ಬಂದ ಭರ್ಮ ಮಾದೇವಿ ಇನ್ನೂ ಅದ ಅವತಾರದಾಗ ಅದಾಳೋ ತಣ್ಣಗಾಗ್ಯಾಳೊ ಅಂತ ಸಂಶಯದಾಗನ ಮನಿ ಹೊಕ್ಕ. ಆದ್ರ ಅಲ್ಲಿ ಬ್ಯಾರೆನ ಹಕೀಕತ್ತು ನಡೆದಿತ್ತು. ಮೈಲಪ್ಪನಿಗೆ ತನ್ನ ಹೆಂಡತಿ ಮಾದೇವಿ ಗ್ಯಾಸ್ ಸಿಲೆಂಡರಿಗಂತ ರೊಕ್ಕ ಕೂಡಿಟ್ಟಿದ್ದು ಹೆಂಗೋ ಗೊತ್ತಾಗಿಬಿಟ್ಟಿತ್ತು. ಅದಕ್ಕ ತಾನು ಕೊಳ್ಳಬೇಕೆಂದಿದ್ದ ಸೆಕೆಂಡ್ ಹ್ಯಾಂಡ್ ಎಕ್ಸೆಲ್ ಗಾಡಿ ಕೈಬೀಸಿ ಕರೆದಂಗಾಗಿ ಆ ರೊಕ್ಕಕ್ಕಾಗಿ ಹೆಂಡತಿಗೆ ಗಂಟ್ ಬಿದ್ದಿದ್ದ. ಆದ್ರ ಮಾದೇವಿ ತಾನು ಗ್ಯಾಸ್ ಸಿಲೆಂಡರಿಗಂತ ಅದನ್ನು ಕೂಡಿಟ್ಟೀನಿ, ಯಾವ್ದ ಕಾರಣಕ್ಕೂ ಅದರಾಗಿನ ಒಂದು ಬಿಲ್ಲೇನೂ ಬಿಚ್ಚಾಂಗಿಲ್ಲ ಅಂತ ಕಡ್ಡಿ ತುಂಡ್ ಮಾಡಿದಂಗ ಹೇಳಿ, ಗ್ಯಾಸ್ ಸಿಲೆಂಡರ್ ತೆಗೆದುಕೊಳ್ಳುವ ತನ್ನ ಕನಸು ಎಲ್ಲಿ ಕಮರಿ ಹೋಗುತ್ತೊ ಅಂತ ಒಳಗೊಳಗ ಸಂಕಟಪಟ್ಟುಕೊಳ್ಳತೊಡಗಿದಳು.

ಅವ್ವ ಅಪ್ಪನ ಈ ಜಗಳ ನೋಡಿದ ಭರ್ಮ ಇದು ತನಗ ಅನುಕೂಲವೇ ಆಯ್ತು ಅಂತ ಭಾವಿಸಿ ಅಡುಗೆಮನಿಗೆ ಕಳ್ ಬೆಕ್ಕು ಬಂದಂಗ ಬಂದ. ಅವನ ಹೊಟ್ಟಿ ಹಸ್ಕೊಂಡು ವಟರಗುಟ್ಟತೊಡಗಿತ್ತು. ಒಂದ್ ಡಬರಿಯೊಳಗ ಜ್ವಾಳದ ಸಂಗಟಿ, ಇನ್ನೊಂದರೊಳ ಮಜ್ಜಿಗಿ ಇರುವುದನ್ನ ನೋಡಿ ಒಂದ್ ತಾಟನ್ಯಾಗ ಹಾಕ್ಕೊಂಡು ಮೆಲ್ಲಕ ಹೊರಾಗ ಬಂದು ಕಟ್ಟಿ ಮ್ಯಾಲ ಕುಂತು ಗುಳು ಗುಳು ನುಂಗತೊಡಗಿದ. ಎಷ್ಟ್ ಹೊತ್ತಾದ್ರೂ ಇಬ್ರುದು ಹಾಕ್ಯಾಡೋದು ನಿಂತಿರಲಿಲ್ಲವಾದ್ದರಿಂದ ತಾನಾ ಚಾಪಿ ಹಾಸಕೊಂಡು ಮಲಗಿ ಮಕದ ಮ್ಯಾಲೆ ಕೌದಿ ಎಳ್ಕೊಂಡ.

* * *

ಎಂದಿನಂಗ ದ್ಯಾಮ, ಲಚುಮಿ, ದುರುಗಿ ಶಿವ್ಯಾರ ಜೊತೆಗೂಡಿ ಸಾಲಿಗೆ ಹೊಂಟಿದ್ದ ಭರ್ಮನ ಎದಿ ಹನುಮಂತ ದೇವರ ಗುಡಿ ಬಂದ ತಕ್ಷಣ ಲಬ್ ಡಬ್ ಅಂತಾನೋ ಡಬ್ ಲಬ್ ಅಂತಾನೊ ಒಟ್ನಲ್ಲಿ ಹೆಂಗೆಂಗೋ ಜೋರಾಗಿ ಬಡಿದುಕೊಳ್ಳತೊಡಗಿತು. ಗುಡಿ ಮಂದಿನ ಕಟ್ಟಿ ಮ್ಯಾಲ ನಿಂಗಪ್ಪಜ್ಜ ಮಲಗಿದ್ದು ಕಾಣ್ಲಾರದಕ್ಕ ಒಂದಷ್ಟ್ ಧೈರ್ಯ ಬಂದು ಉಸಿರು ಸರಾಗ ಆತು. ಊರಾನ ಹೆಣ್ಮಕ್ಳು ಹನುಮಪ್ಪನಿಗೆ ಒಳ್ಳೆಣ್ಣಿ ಹಾಕಿ ಊದಬತ್ತಿ ಬೆಳಗಿ ಒಂದ್ ರೂಪಾಯೋ ಎರಡು ರೂಪಾಯಿಯೋ ಗರ್ಭಗುಡಿಯ ಬಾಗಿಲ ಮ್ಯಾಲಿಟ್ಟು ಹೊಂಟಿದ್ದು ಭರ್ಮನಿಗೆ ಕಂಡಿತು. ತಕ್ಷಣ ಒಂದೇ ಬಾರಿಗೆ ಎರಡೂ ಕನಸುಗಳನ್ನು ತೀರಿಸಿಕೊಳ್ಳಬಹುದು ಎನ್ನುವ ಐಡಿಯಾ ಬಂತು ಅವನಿಗೆ. ಗಂಟನೂ ಹೊಡದಂಗ ಆಗ್ತೈತಿ ಅಲ್ಲಿರುವ ಚಿಲ್ರೆನೂ ತಗೊಂಡು ಗೋಬಿನೂ ತಿನ್ನಬಹುದು ಎನ್ನುವ ಯೋಚನೆಗೆ ಪುಳಕಿತಗೊಂಡು ದೂರದಿಂದಲೆ ಹನುಮಪ್ಪಗ ಕೈಮುಗಿದ. ಆದ್ರ ತಾನು ಈಗೇನಾದ್ರೂ ಗಂಟಿ ಹೊಡಿಯಾಕ ಹೋದ್ರ ಈ ಲಚುಮಿ ದುರುಗಿಯರು ತನ್ನನ್ನ ತಡೀತಾರ ಅನಿಸಿ, ಅವರ ಜೊತೆ ಸಾಲಿವರೆಗೂ ಹೋಗುವ ನಾಟಕ ಮಾಡಿ ತನ್ನ ಕ್ಲಾಸಿನೊಳಗ ಪಾಟಿಚೀಲ ಇಟ್ಟ. ಸ್ವಲ್ಪ ಹೊತ್ತು ಕಾದು ಯಾರೂ ತನ್ನನ್ನು ಗಮನಿಸದ ಹಾಗೆ ಹಗುರ್ಕ ಗುಡಿಕಡೆ ಬಂದ.

ಅದ್ಯಾವಾಗ್ಲೋ ನಿಂಗಪ್ಪಜ್ಜ ಬಂದು ಕಟ್ಟಿ ಮ್ಯಾಲ ಮಲ್ಕೊಂಡಿದ್ದು ನೋಡಿ ಭರ್ಮನಿಗೆ ಹೆದರಿಕಿ ಆತು. ಗಂಟಿ ಹೊಡಿಲೋ ಬ್ಯಾಡೊ ಎನ್ನುವ ಗೊಂದಲಕ್ಕ ಬಿದ್ದಿದ್ರೂ ಈ ಸಮಯ ಬಿಟ್ರ ಮತ್ಯಾವತ್ತೂ ತಾನು ಗಂಟಿ ಹೊಡ್ಯಾಕ ಆಗೋದಿಲ್ಲವೇನೋ ಅಂತ ಅನಿಸತೊಡಗಿತು. ಅದಕ್ಕ ಸುತ್ತಮುತ್ತ ಯಾರೂ ಇಲ್ಲ ಅಂತ ಖಾತ್ರಿ ಮಾಡ್ಕೊಂಡು ನಿಂಗಪ್ಪಜ್ಜಗ ಕಾಣ್ಲಾರದಂಗ ನಿಧಾನಕ್ಕ ಗುಡಿಯೊಳಗ ಕಾಲಿಟ್ಟ. ಗುಡಿಯೊಳಗಿನ ತಂಪು, ಶಾಂತ ವಾತಾವರಣ ಅವನಿಗೆ ಎಂತಹದ್ದೊ ಹೊಸ ಲೋಕದೊಳಗ ಪ್ರವೇಶಿಸಿದಂತಾಯ್ತು. ಮ್ಯಾಲ ನೋಡಿದ್ರ ಇಷ್ಟಗಲವಿದ್ದ ಗಂಟಿ ಅವನ ಕೈಗೆಟುಕಲಾರದಷ್ಟು ಎತ್ತರಕ್ಕಿತ್ತು. ನಿಂತಲ್ಲೆ ಹಾರಿ ಅದನ್ನು ಬಾರಿಸಲು ಪ್ರಯತ್ನಿಸಿದನಾದರೂ ಅದು ಸಾಧ್ಯವಾಗಲಿಲ್ಲ. ಒಂದೆರೆಡು ಹೆಜ್ಜೆ ಹಿಂದೆ ಬಂದು ಓಡಿ ಹೋಗಿ ಜಿಗಿದು 'ಢಣ್' ಅಂತ ಬಡಿದೇಬಿಟ್ಟ. ಆಗ ಅವನಿಗಾದ ಆನಂದ ಅಷ್ಟಿಷ್ಟಲ್ಲ. ಅದರ ಶಬ್ದದ ಗುಂಗು ಇವನ ಕಿವಿ ಹೊಕ್ಕು ಮೆದುಳನ್ನು ಆವರಿಸಿಕೊಂಡಿತು. ಇಷ್ಟು ದಿನದ ಆಸೆ ಕೈಗೂಡಿದ್ದಕ್ಕ ಭರ್ಮನಿಗೆ ಮೈಯೆಲ್ಲಾ ಕರೆಂಟು ಹರಿದಂಗಾಗಿ ಕನಸೋ ನನಸೋ ಒಂದೂ ತಿಳಿಲಿಲ್ಲ. ಗರ್ಭಗುಡಿಯ ಹನುಮಪ್ಪ ಭರ್ಮನನ್ನು